ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರು ಏನು ಹೇಳಿದರೋ ಅದನ್ನೇ ಮತ್ತೆ ನಾನೂ ಕೂಡ ಹೇಳಬೇಕಾಗುತ್ತದೆ. ಮಾನ್ಯ ಆರೋಗ್ಯ ಮಂತ್ರಿಗಳನ್ನೂ ಮತ್ತು ಮಾನ್ಯ ಆರೋಗ್ಯ ಇಲಾಖೆಯ ನಿರ್ದೇಶಕರನ್ನೂ ಕರೆಯಿಸಿಕೊಂಡು ತಾವು ಈಗ ಪ್ರಸ್ತಾಪಿಸಿರತಕ್ಕ ವಿಚಾರದಲ್ಲಿ ಸರ್ಕಾರದ ವತಿಯಿಂದ ಏನು ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬುದನ್ನು ಇವತ್ತು ಸಂಜೆಯೊಳಗಾಗಿ ತಮಗೆ ತಿಳಿಸುತ್ತೇನೆ.

2. ಮೆಡಿಕಲ್ ಮುತ್ತ ಇಂಜನಿಯರಿಂಗ್ ಕೋರ್ಸಿಗೆ ಸಂಬಂಧಪಟ್ಟ ಸಿ.ಇ.ಟಿ. ಪರೀಕ್ಷೆಯ ಮುಂದೂಡಿಕೆ ಕುರಿತು.

* ಶ್ರೀ ಬಿ. ಎಸ್. ಯಡಿಯೂರಪ್ಪ : ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಮಾನ್ಯ ಉನ್ನತ ಶಿಕ್ಷಣ ಖಾತೆ ಮಂತ್ರಿಗಳಿದ್ದಾರೆ. ಅವರು ವಿಧಾನ ಪರಿಷತ್ತಿನಲ್ಲಿ ಇತ್ತೀಚೆಗೆ ಒಂದು ಹೇಳಿಕೆಯನ್ನು ಕೊಟ್ಟು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುವ ಸಲುವಾಗಿ ಸಿ.ಇ.ಟಿ. ಪರೀಕ್ಷೆಯನ್ನು ಈ ಸಾರಿಗೂ ಮುಂದುವರೆಸುತ್ತೇವೆಂದು ಹೇಳಿದ್ದಾರೆ. ನಾನಾದರೂ ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸ್ಥಾವಿರಾರು ಜನ ವಿದ್ಯಾರ್ಥಿಗಳು ಈ ಸಾರಿ ಸಿ.ಇ.ಟಿ. ಪರೀಕ್ಷೆಯನ್ನು ಮಾಡುತ್ತಾರೋ ಅಥವಾ ಇಲ್ಲವೋ ಎಂಬ ಒಂದು ಗೊಂದಲದಲ್ಲಿ ಸಿಕ್ಕಿಕೊಂಡಿದ್ದಾರೆ. ನಾನಾದರೂ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಸಲಹೆ ಕೊಡುವುದೆಂದರೆ ಪ್ರತಿಸಾರಿಯಂತೆ ಸಿ.ಇ.ಟಿ. ಪರೀಕ್ಷೆಯನ್ನು ಈ ಸಾರಿ ಕೂಡ ಮಾಡಿ. ಮುಂದಿನ ಸಾರಿಯಿಂದ ಇದರ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ಇಲ್ಲಿ ಒಂದು ವ್ಯಾಪಕವಾದ ಚರ್ಚೆಯನ್ನು ಮಾಡಿ ಒಂದು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ ಏಕೆಂದರೆ ಈ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸಿ.ಇ.ಟಿ. ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಸಿದ್ಧತೆಯನ್ನು ಇಷ್ಟು ಹೊತ್ತಿಗೆ ಮಾಡಿಕೊಳ್ಳಬೇಕಾಗಿತ್ತು, ಎಲ್ಲ ರೀತಿಯ ವ್ಯವಸ್ಥೆ ಆಗಬೇಕಾಗಿತ್ತು, ಡೇಟ್ ಕೂಡ ಅನೌನ್ಸ್ ಆಗಬೇಕಾಗಿತ್ತು. ಸುಮಾರು ಒಂದು ತಿಂಗಳ ಮುಂಚೆಯೇ ಈ ಸಂಬಂಧ ಎಲ್ಲಾ ತಯಾರಿ ಆಗಬೇಕಾಗಿತ್ತು. ಇದುವರೆಗೂ ಇದರ ಬಗ್ಗೆ ಅಂತಿಮ ನಿರ್ಧಾರ ಹೊರಬರಲಿಲ್ಲ. ಇದರಿಂದಾಗಿ ಮುಂದೆ ನಮ್ಮ ಭವಿಷ್ಯ ಏನಾಗಬಹುದೆಂಬ ಬಗ್ಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಚಿಂತಾಕ್ರಾಂತವಾಗಿದ್ದಾರೆ. ನಾವು ಗಡಿಬಿಡಿಯಲ್ಲಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಿಂತ, ಅಲ್ಲಿ ಏನು ಲೋಪದೋಷವಾಗಿದೆ ಅದನ್ನು ಸರಿಪಡಿಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು, ಸರ್ಕಾರ ಶಕ್ತಿಯುತವಾಗಿದ್ದಾರೆ. ಮುಂದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡೋಣ. ಈಗಾಗಲೇ ಮಾನ್ಯ ಉನ್ನತ ಶಿಕ್ಷಣ ಖಾತೆ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಹೇಳಿಕೆಯನ್ನು ಕೊಟ್ಟಿರುವುದರಿಂದ ಸಿ.ಇ.ಟಿ. ಪರೀಕ್ಷೆಯ ಬಗ್ಗೆ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರೆ ವಿದ್ಯಾರ್ಥಿಗಳು ಮುಂದೆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಪತ್ರಿಕೆಗಳಲ್ಲಿ ಇವತ್ತೂ ಕೂಡ ಬಂದಿರುವುದರಿಂದ ಇದನ್ನೂ ಕ್ಲಿಯರ್ ಮಾಡಿದರೆ ಒಳ್ಳೆಯದು.

ಶ್ರೀ ಡಿ. ಮಂಜುನಾಥ್ : ನಿನ್ನೆ ಮೊನ್ನೆಯಿಂದ ಪಿ.ಯು.ಸಿ. ಪರೀಕ್ಷೆಗಳು ಪ್ರಾರಂಭವಾಗಿವೆ. ಮೊನ್ನೆ ಮಾನ್ಯ ಮುರಾರ್ಜಿಯವರು ತೀರಿಕೊಂಡಿದ್ದರಿಂದ ಪಿ.ಯು.ಸಿ. ಪರೀಕ್ಷೆ ಒಂದೆರಡು ದಿನ ಮುಂದಕ್ಕೆ ಹೋಯಿತು. ಈ ಪಿ.ಯುಸಿ. ಪರೀಕ್ಷೆಗಳು ಮುಗಿಯುವುದರೊಳಗಾಗಿ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಈ ಮನೆಯ ಸದಸ್ಯರಾಗಿದ್ದೇವೆ. ತಾವು ಆ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದೀರಿ. ಸಿ.ಇ.ಟಿ. ಪರೀಕ್ಷೆಯನ್ನು ನಾವು ಈ ವರ್ಷ ಮುಂದುವರೆಸುತ್ತೇವೆಂದು ಹೇಳಿದ್ದೀರಿ. ಈ ಪರೀಕ್ಷೆಯನ್ನು ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಿದರೆ, ಒಳ್ಳೆಯದು. ಈ ವರ್ಷ ವಿದ್ಯಾರ್ಥಿಗಳಲ್ಲಿ ಗೊಂದಲ ಆಗುವುದು ಬೇಡ ಸಿ.ಇ.ಟಿ. ಪರೀಕ್ಷೆ ಮುಂದುವರೆಯಲಿ.

ಶ್ರೀ ಡಿ. ಮಂಜುನಾಥ್ : ಗೊಂದಲ ಇಲ್ಲದಂತೆ ಮಾಡೋಣ. ಇದರ ಬಗ್ಗೆ ಒಂದು ಕಾಯಿದೆಯನ್ನು ತರಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇಷ್ಟರಲ್ಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ವಿಧಾನ ಪರಿಷತ್ತಿನಲ್ಲಿ ಹೇಳಿಕೆಯನ್ನು ಕೊಟ್ಟಿದ್ದೀರಿ ಅಲ್ಲವೆ ?

ಶ್ರೀ ಡಿ. ಮಂಜುನಾಥ್ : ಅಲ್ಲಿ ಕೊಟ್ಟಿದ್ದು ಆಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ಇದು ಸಾವಿರಾರು ವಿದ್ಯಾರ್ಥಿಗಳ ಪ್ರಶ್ನೆ. ತಾವು ತುರ್ತಾತುರಿಯಲ್ಲಿ ಯಾವುದೇ ಒಂದು ಮಸೂದೆಯನ್ನು ಇಲ್ಲಿ ತಂದರೂ ಕೂಡ ಅದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕಾಗುತ್ತದೆ. ಒಂದು ಅಂತಿಮ ತೀರ್ಮಾನಕ್ಕೆ ಬರಬೇಕಾಗುತ್ತದೆ. ವಿದ್ಯಾರ್ಥಿವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ತಾವು ತೆಗೆದುಕೊಳ್ಳುವ ಯಾವುದೇ ತೀರ್ಮಾನಕ್ಕೂ ನಾವು ಬದ್ಧವಾಗಿರುತ್ತೇವೆ. ನಾವು ನಮ್ಮ ಸಹಕಾರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಅದರೆ ಇದುವರೆಗೂ ನಡೆದುಕೊಂಡು ಬಂದಿರುವ ನಿಯಮದಂತೆ ಈಗಾಗಲೇ ಪರೀಕ್ಷೆಗೆ ಸಂಬಂಧಪಟ್ಟಂತೆ ಎಲ್ಲ ಸಿದ್ಧತೆಗಳೂ ಆಗಬೇಕಾಗಿತ್ತು. ಆದರೆ ಇನ್ನೂ ಆಗಿಲ್ಲ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ, ಈ ವರ್ಷ ಸಿ.ಇ.ಟಿ. ಪರೀಕ್ಷೆಯನ್ನು ಮುಂದುವರೆಸಿ. ಆಮೇಲೆ ಬಿಲ್‌ನ್ನು ಇಲ್ಲಿ ನೀವು ತಂದಾಗ ಚರ್ಚೆ ಮಾಡೋಣ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಮತ್ತು ಈಗ ಏನು ಲೂಟಿ ಆಗುತ್ತಿದೆ ಇದು ನಿಲ್ಲುವಂತೆ ಮಾಡಲು ನಾವು ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ. ಆದರೆ ಅಲ್ಲಿಯವರೆಗೂ ವಿದ್ಯಾರ್ಥಿಗಳು ಕಾಯುವುದು ಬೇಡ. ಆದ್ದರಿಂದ ಈ ವರ್ಷ ಸಿ.ಇ.ಟಿ. ಪರೀಕ್ಷೆಯನ್ನು ಮಾಡುವಂತೆ ಸಂಬಂಧಪಟ್ಟವರಿಗೆ ಸೂಚನೆ ಕೊಡಿ ಎಂದು ನಾನು ತಮಗೆ ಸೂಚಿಸಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ : ನಾವು ಈಗ ತುರ್ತಾಗಿ ಇದರ ಬಗ್ಗೆ ಒಂದು ಮಸೂದೆಯನ್ನು ತರುತ್ತೇವೆ. ಅವಶ್ಯಕವೆನಿಸಿದರೆ ಇದರ ಬಗ್ಗೆ ಒಂದು ವಿಶೇಷ

ಅಧಿವೇಶನವನ್ನೇ ಕರೆದು ತೀರ್ಮಾನ ತೆಗೆದುಕೊಳ್ಳೋಣವೆಂದು ಮಾನ್ಯ ಮುಖ್ಯ-ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಇದು ಅಷ್ಟೊಂದು ಸುಲಭವಾಗಿ ತೆಗೆದುಕೊಳ್ಳುವ ವಿಚಾರವಲ್ಲ. ಸರ್ಕಾರದವರು ಇದಕ್ಕೆ ಒಂದು ಕಾಯಿದೆಯನ್ನು ತರುತ್ತೇವೆಂದು ಹೇಳುತ್ತಿರುವುದು ಸ್ವಾಗತಾರ್ಹ. ಅದು ಬಂದಾಗ ಚರ್ಚೆ ಮಾಡಿ ಆ ಕಾಯಿದೆ ಬಂದಾಗ ಇಲ್ಲಿ ಚರ್ಚೆಯಾಗಿ ಪಾಸ್ ಆದಮೇಲೆ ಅನಂತರ ಆ ಸದನದಲ್ಲಿ ಕೂಡ ಚರ್ಚೆಯಾಗಿ ಪಾಸ್ ಆಗಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಅದಕ್ಕೆ ಮಾನ್ಯ ರಾಜ್ಯಪಾಲರೂ ಕೂಡ ತಮ್ಮ ಅನುಮೋದನೆಯನ್ನು ಕೊಡುವುದಕ್ಕಾಗುವುದಿಲ್ಲವೆನಿಸುತ್ತದೆ. ಏಕೆಂದರೆ, ಅದು ರಾಷ್ಟ್ರಮಟ್ಟದ ಪ್ರಶ್ನೆಯಾಗಿರುವುದರಿಂದ ಅದು ಮಾನ್ಯ ರಾಷ್ಟ್ರಪತಿಯವರಿಗೇ ಹೋಗಬೇಕಾಗಬಹುದು. ಮಾನ್ಯ ರಾಷ್ಟ್ರಪತಿಯವರ ಅನುಮೋದನೆಗೆ ಹೋದರೆ ಕನಿಷ್ಠ 3 ತಿಂಗಳಾದರೂ ಬೇಕಾಗುತ್ತದೆ. ಆದ್ದರಿಂದ 1995-96ರ ಶೈಕ್ಷಣಿಕ ವರ್ಷದ ನಿರ್ಣಯವನ್ನು ತಾವು ತೆಗೆದುಕೊಳ್ಳಲೇಬೇಕಾಗುತ್ತದೆ. ಏಕೆಂದರೆ ಈಗಾಗಲೇ ನೋಟಿಫಿಕೇಷನ್ ಕೊಟ್ಟಿರುವಂತೆ ಪರೀಕ್ಷೆ ಏಪ್ರಿಲ್ ಅಂತ್ಯದಲ್ಲಿ ಅಥವಾ ಮೇ ನಲ್ಲಿ ಆಗಲೇ-ಬೇಕು. ಇಲ್ಲದಿದ್ದರೆ ವೃತ್ತಿಪರ ಶಿಕ್ಷಣದ ವ್ಯವಸ್ಥೆಯಲ್ಲಿ ವಿಶೇಷ ರೀತಿಯ ಗೊಂದಲವಾಗುತ್ತದೆ. ಆದ್ದರಿಂದ ಸರ್ಕಾರ ದಯಮಾಡಿ ಇವತ್ತು ಅಥವಾ ನಾಳೆಯೊಳಗೆ ಸ್ಪಷ್ಟವಾದಂಥ ಹೇಳಿಕೆಯನ್ನು ಕೊಡಬೇಕು. ಯಾವುದೇ ನಿರ್ಣಯ ತೆಗೆದುಕೊಳ್ಳದಿದ್ದರೂ ಕೂಡ ಸಿ.ಇ.ಟಿ. ಮಾಡುವುದಿಲ್ಲ ಎಂದರೆ ಸಿ.ಇ.ಟಿ. ಮಾಡುವುದಿಲ್ಲ ಎಂದು ಹೇಳಿ. ಅದರೆ ಸಿ.ಇ.ಟಿ. ವ್ಯವಸ್ಥೆ ಏಕೆ ಬಂತು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ರಾಷ್ಟ್ರದ ಎಲ್ಲಾ ರಾಜ್ಯದವರೂ ಕೂಡ ಸಿ.ಇ.ಟಿ. ಪರೀಕ್ಷೆಯನ್ನು ಒಂದು ಯೋಗ್ಯವಾದ ಕ್ರಮವೆಂದು ಅನುಸರಿಸುತ್ತಿರತಕ್ಕ ಸಮಯದಲ್ಲಿ ನೀವು ಇದನ್ನು ರದ್ದು ಮಾಡಲಿಕ್ಕೆ ಹೊರಟಿದ್ದೀರಿ. ಇದು ಎಷ್ಟರ ಮಟ್ಟಿಗೆ ಸಮಂಜಸ ಎಂಬುದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಅದನ್ನು ಮುಂದುವರೆಸುವುದು ಒಳ್ಳೆಯದು. ಆದ್ದರಿಂದ ತಾವು ತಕ್ಷಣವೇ ಇವತ್ತು ನಾಳೆಯೊಳಗೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ಕೊಟ್ಟು ಆ ಪರೀಕ್ಷೆಗಳನ್ನು ನಡೆಸತಕ್ಕಂಥ ಒಂದು ಕಾರ್ಯಕ್ರಮ ತೆಗೆದುಕೊಳ್ಳದಿದ್ದಲ್ಲಿ ಇದರಲ್ಲಿ ಒಂದು ಬಹಳ ದೊಡ್ಡ ಅವಾಂತರ ಮತ್ತು ಗೊಂದಲ ಆಗುತ್ತದೆ ಎನ್ನುವುದನ್ನು ಮಾನ್ಯ ಅಧ್ಯಕ್ಷರ ಮುಖೇನ ಸರ್ಕಾರದ ಗಮನಕ್ಕೆ ತರಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಪತ್ರಿಕೆಗಳಲ್ಲಿಯೂ ಕೂಡ ಸ್ಪಷ್ಟವಾಗಿ ಬಂದಿದೆ ಇಡೀ ರಾಜ್ಯದಲ್ಲಿ ಗೊಂದಲ ಇರುವುದರಿಂದ ಸರ್ಕಾರ ಸ್ಪಷ್ಟ ಹೇಳಿಕೆ ಕೊಡಬೇಕಾಗುತ್ತದೆ. ತಾವು ಯಾವಾಗ ಪರೀಕ್ಷೆಗಳನ್ನು ಮಾಡುತ್ತೀರಿ ? ಇದರ ಬಗ್ಗೆ ನಿಮ್ಮ ನಿಲುವು ಏನು ಎಂದು ಹೇಳಬೇಕಾಗುತ್ತದೆ. ಏಕೆಂದರೆ ವಿಧಾನ ಪರಿಷತ್ತಿನಲ್ಲಿ ಕ್ಲಿಯರ್ ಮಾಡಿದ್ದೀರಿ, ಮತ್ತೆ ನೀವು ಪೆಂಡಿಂಗ್ ಇಟ್ಟುಕೊಂಡರೆ ಇಡೀ ರಾಜ್ಯದಲ್ಲಿ ಮತ್ತೆ ಗೊಂದಲವಾಗುತ್ತದೆ.

ಅಧ್ಯಕ್ಷರು : ಎರಡನೇಯ ಪಿ.ಯು.ಸಿ. ಪರೀಕ್ಷೆ ಇವತ್ತು ಶುರುವಾಗುತ್ತಿದೆ. ಪರೀಕ್ಷೆ ಮುಗಿದು, ಫಲಿತಾಂಶ ಬರಬೇಕಾಗುತ್ತದೆ. ಇನ್ನೂ ಸಮಯವಿದೆ ಅಷ್ಟರೊಳಗೆ ಮಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ : ವಿರೋಧ ಪಕ್ಷದ ಮುಖಂಡರ ಕಳಕಳಿ ನಮಗೆ ಅರ್ಥವಾಗುತ್ತದೆ. ಪರೀಕ್ಷೆ ಈಗಿನ್ನೂ ಶುರುವಾಗಿದೆ. ಪಿ.ಯುಸಿ. ಪರೀಕ್ಷೆ ಫಲಿತಾಂಶ ಹೊರ ಬಿದ್ದ ಮೇಲೆ ಉತ್ತೀರ್ಣರಾದಂಥವರು ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷೆಗೆ ಅವರು ನಾಳೆ ಬೆಳಿಗ್ಗೆ ಕೂಡುವುದಿಲ್ಲ. ಸರ್ಕಾರ ತನ್ನ ನಿಲುವನ್ನು ಸಕಾಲದಲ್ಲಿ ಘೋಷಣೆ ಮಾಡುತ್ತದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಸ್ಥಿತಿ ಇದೆ. ಆಂಧ್ರದಲ್ಲಿ ಒಂದು ಸ್ಥಿತಿ ಇದೆ, ಮಹಾರಾಷ್ಟ್ರದಲ್ಲಿ ಒಂದು ಸ್ಥಿತಿ ಇದೆ. ತಮಿಳುನಾಡಿನಲ್ಲಿ ಒಂದು ಸ್ಥಿತಿ ಇದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಿದೆ. ನಾವು ಏನು ನಿರ್ಣಯ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸೂಕ್ಷ್ಮವಾಗಿ ನಾವು ಮೊನ್ನೆ ಸದನದಲ್ಲಿ ಒಂದು ಮಾತು ಹೇಳಿದ್ದೇವೆ. ಪ್ರವೇಶ ಪರೀಕ್ಷೆಯನ್ನು ಕೈ ಬಿಡುತ್ತೇವೆ ಅಥವಾ ಕೈ ಬಿಡುವುದಿಲ್ಲ ಎನ್ನುವ ಪ್ರಶ್ನೆ ಬಗ್ಗೆ ವಿಚಾರ ಮಾಡಬೇಕಾಗಿದೆ. ಇದನ್ನು ಕೇವಲ ಕರ್ನಾಟಕದ ಹುಡುಗರಿಗೆ ಮಾಡಬೇಕೇ? ಇಡೀ ರಾಷ್ಟ್ರದ ಎಲ್ಲಾ ಹುಡುಗರಿಗೂ ಮಾಡಬೇಕೇ ? ಇವೆಲ್ಲವುಗಳ ಬಗ್ಗೆ ಯೋಜನೆ ಮಾಡಿ ಸರ್ಕಾರ ತನ್ನ ನಿಲುವನ್ನು ಅಂತಿಮವಾಗಿ ಘೋಷಣೆ ಮಾಡುತ್ತದೆ.

(3) ನಗರಸಭೆ ಮತ್ತು ಪುರಸಭೆಗಳಲ್ಲಿ ಕುಡಿಯುವ ನೀರಿನ ದರದಲ್ಲಿ ಹೆಚ್ಚಳ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, 1-4-95 ರಿಂದ ಮಹಾನಗರ ಪಾಲಿಕೆ, ನಗರ ಸಭೆ ಮತ್ತು ಪುರಸಭೆಗಳಲ್ಲಿ ಕುಡಿಯುವ ನೀರಿನ ದರವನ್ನು ಯದ್ವಾತದ್ವಾ ಜಾಸ್ತಿ ಮಾಡಿದ್ದಾರೆ. ಇದು ಬಹಳ ಪ್ರಮುಖವಾದಂಥಾದ್ದು. ಈ ಸಭೆ ನಡೆಯುವಾಗ ಸರ್ಕಾರ .....

ಅಧ್ಯಕ್ಷರು : ವೈಜನಾಥ ಪಾಟೀಲ್‌ರವರು ಬಂದಿಲ್ಲ. ಎಲ್ಲಾ ಕೆಲಸಗಳನ್ನು ಮುಖ್ಯ ಮಂತ್ರಿಗಳೇ ಮಾಡುವುದಕ್ಕಾಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಯವರು ಹೇಳಲಿ. ಅವರಿಗೆ ಎಲ್ಲಾ ಗೊತ್ತಿರುತ್ತದೆ. 6 ಪೈಸೆ ಇದ್ದದ್ದನ್ನು 45 ಪೈಸೆ ಮಾಡಿ ಹತ್ತತ್ತು ಪಟ್ಟು, ಇಪ್ಪಿಪ್ಪತ್ತು ಪಟ್ಟು ಜಾಸ್ತಿ ಮಾಡಿದ್ದಾರೆ. ಇದು ವೈಜ್ಞಾನಿಕವಾಗಿಲ್ಲ. ಹೇಳದೇ, ಕೇಳದೇ ಜಾಸ್ತಿ ಮಾಡಿದ್ದಾರೆ. ಇದು ಸರಿಯಿಲ್ಲವೆಂದು ನನಗನ್ನಿಸುತ್ತಿದೆ. ಸರ್ಕಾರ ಈಗ ಸ್ಪಷ್ಟಪಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ತಡೆಹಿಡಿಯಬೇಕು. ಕುಳಿತುಕೊಂಡು ಮಾತನಾಡಿ, ವೈಜ್ಞಾನಿಕವಾಗಿ ದರವನ್ನು ಜಾಸ್ತಿ ಮಾಡುವ ಬಗ್ಗೆ ಒಂದು ಚರ್ಚೆ ನಡೆಯಬೇಕು. ಅದು ಬಿಟ್ಟು ಯದ್ವಾತದ್ವಾ ಜಾಸ್ತಿ ಮಾಡುವುದಾದರೆ ಅದು ಸರಿಯಾದ ನೀತಿ ಅಲ್ಲ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದನ್ನು ಅವರು ತಕ್ಷಣಕ್ಕೆ ತಡೆಹಿಡಿಯಬೇಕು. 1-4-95ರಲ್ಲಿ ಪ್ರಾರಂಭ ಮಾಡಿದ್ದಾರೆ, ಹತ್ತು ಪಟ್ಟು ಜಾಸ್ತಿ ಮಾಡಿದ್ದಾರೆ.